# ಶಾಸನಗಳಲ್ಲಿ ಊರ ಹೆಸರಗಳು

ಸೃಷಿಯ ಪ್ರ ತಿಯೊಂದು ಪದಾರ್ಥಕ್ಕೊ ಒಂದು ಹಿನ್ನೆಲೆ, ಇತಿಹಾಸ ಇರುತ್ತ್ದ; ಪ್ರ ತಿಯೊಬ್ಬ ವ್ಯಕ್ತಿಗೊ, ಪ್ರತಿಯೊಂದು ಊರಿಗೂ ಚರಿತ್ರ ಇರುತ್ತದೆ. ವ್ಯ್ಯಕ್ತಿಯ ಹೆಸರೂ, ಊರಿನ ಹೆಸರೂ ಬರಿಯ ಹಸರುಗಳಲ್ಲ. ಆ ಹೆಸರುಗಳ ಉಸಿರಲ್ಲಿ ಆತಚರಿತ್ರ ಇರುತ್ತ್ದೆ. ಕನ್ನಡದ ಶಾಸನಗಳಲ್ಲಿ ಸಾವಿರಾರು ಊಒರುಗಳ ಹೆಸರುಗಳು ಸಿಗುತ್ತವೆ .ಅಂತಹ ಹೆಸರುಗಳಲ್ಲಿ ಅಡಗಿರುವ ನಾನಾ `ಅಂಶಗಳನ್ನು ಅಧ್ಯಯನ ಮಾಡುವ ಪ್ರಯತಗಳೊ ನಡೆದಿವೆ. ಪ್ರಸ್ತುತ ಸಣಹಂಪ್ರಬಂಧದಲ್ಲಿ ಜೈನಪಳೆಯುಳಿಕೆಯ ಕೆಲವು ಸಳನಾಮಗಳನ್ನು ಗುರುತಿಸುವ ಪ್ರಯತವಿದೆ.

೧. ಅರುವ(ಹ) ನಹಳ್ಳಿ; ಎ.ಕ. ೭ (ಪ)ಮದೂರು ೬೨(೧೧೧ಮವ೧೧೮) ೧೩೬೮೦ಅರುವನಹಳ್ಳಿ (ಮಂಡ್ಯ ಜಿ.\ಮದೂರು. ತಾ). ಪು. ೩೦೮.

ಜಮಂಡ್ಯ ಜಿಲ್ಲೆ ಮದೂರು ತಾಲೂಕಿನಲ್ಲಿರುವ'ಅರುವನಹಳ್ಳಿ'ಯಲ್ಲಿ ಒಟ್ಟು ೧೩ ಶಾಸನಗಳು ದೊರೆತಿವೆ [ಅದೇ , ೮೪ ರಿಂದ೯೬: ಪು ೩೦೩ ರಿಂದ೩೧೧] ಈಊರಿನ ಹೆಸರಿನ ಸರಿಯಾದ ರೂಪ'ಅರುಹನಹಳ್ಳಿ ' ಎಂಬುದು. ಇದು ಶಾಸನಗಳಲ್ಲಿ ದಾಖಲಾಗಿದೆ.

ಅರುಹನಹಳಿಯ ಕೀರ್ತ್ತಿಯರರ ಮಕ್ಕಳು, ಅದೇ ಪು.೩೦೪

ಅರುಹನ ಹಳ್ಳಿಯ ಭಟ್ಟರ ಬಾ ..................ಪು . ೩೦೭

ಅರುಹನ ಹಳ್ಳಿಯಲ್ಲಿಕೆಂಪಣ್ಣವೊಡೆಯರು........ಪು೩೦೮

ಅರುಹನ ಹಳ್ಳಿಯ ಸಮಸಗಲುಡುಪ್ರ ಜೆ..........ಪು.೩೧೦

ಅರುಹನಹಳ್ಳಿ ಎಂಬುದು ಕ್ರಮೇಣ ಉಚಾರ ಸೌಲಭ್ಯಕ್ಕಾಗಿ ಅರುವನಹಳ್ಳಿ ಎಂದಾಗಿದೆ. ಅರುವ(ಅರ್ಹಂತ ಜಿನ )ಬಸದಿಗಳುಫ್ರಮುಖವಾಗಿ ಇದುದರಿಂದ ಈ ಊರಿಗೆ ಅರುವನಹಳ್ಳಿ ಎಂದು ಹೆಸರಾಗಿದೆ. ಇಲ್ಲಿನ ಶಾಸನಗಳಲ್ಲಿ 'ಸಾಕ್ಷಿಗಳ ಒಪ್ಪ ಶ್ರೀವೀತರಾಗ ವೀತರಾಗ' (ಅದೇ, ೮೯. ೧೩ ೮೮. ಪು. ೩೦೭) ಎಂದು ಇರಬೇಕಾದರೆ ಜೈನ ಫ್ರಭಾವನಿಚಳವಾಗಿದೆ. ಆದರೆ ಎಂದುಈ ಊರಿನಲ್ಲಿ ಜಿವನಮಂದಿರದ ಕುರುಹಗಳು ಉಳಿದಿಲ್ಲ

೨. ಆರುಹನ ಹಳ್ಳಿ: ಎ,ಕ.(ಪ)ನಾಮುಂ. ೧೬೯ (ಳನಾಮುಂ.೯೪) ೧೧೪೨. ಕಸಲಗೆರೆ(ಮಡ್ಯ ಜಿ./ನಾಮುಂತಾ.) ಪು. ೧೬೭–೬೯

ಈ ಶಾಸನಗಳ ಬಸದಿಗೆವಾಯ ವಾಯವ್ವ್ಯದ ದೆಸೆಯಲ್ಲಿ ಅರುಹನ ಹಳ್ಳಿಯಸಿಮಾಂತ್ವರವನ್ನು ಹೇಳಿದೆ[ಸಾಲು:೪೨ಮತ್ತು೪೫]

್ಣಮದೂರು ತಾಲೂಕಿನಲ್ಲಿ ಒಂದು ಅರುಹನಹಳ್ಳಿ ಹಾಗೂನಾಗಮಂಗಳತಾಲೂಕಿನಲ್ಲಿ ಒಂದು ಅರುಹನಹಳ್ಳಿ ಹೀಗಿ ಎರಡು ಅರುಹನ ಹಳ್ಳಿಗಳನ್ನು ಶಾಸನಗಳು ದಾಖಲಿಸಿವೆ. ಈ ಶಾಸನದಲ್ಲಿ ಅತ್ತಿಮಬೆಯ ಹೆಸರಿನ ಉಲೇಖವುಬಂದಿರುವುದು ಗಮನಾರ್ಹವಾಗಿದೆ.ಅರುಹನಹಳ್ಳಿ

ಅರುಹನಹಳ್ಳಿ ಎಂಬ ಊರಿನ ಹೆಸರನ್ನು ಪರಿಭಾವಿಸುವ ಸಂದರ್ಭದಲ್ಲಿ 'ಅರುಹನಹನಕಲ್ಲಾ ಅಡ್ಡವಟ್ಟ' [ಅದೇ,ನಾಮುಂ. ೬೧(ಳನಾಮುಂ೨೮) ೧೧೩೮. ಲಾಲನಕೆರೆ(ಮಂಡ್ಯ ಜಿ./ನಾಮುಂತಾ.) ಪು. ೩೬] ಎಂಬೊಂದು ಗಡಿಕಲ್ಲಮೇರೆಯ ಸೂಚನೆಯ್ಯನೂ ಗಮನಿಸಬಹುದು.

ಅರುಹನಹಳ್ಳಿ: ಬೆಳುಹುಳದಜಿನಧರ್ಮಕ್ಕೆ ಬಿಟ್ಟಥ ಗ್ರಾಮ ಅರ್ಹನಹಳ್ಳಿ [೦ಎ.ಕ.೨(ಪ) ೩೫೧(೨೪೯ ) ೧೭೨೩]

೩ . ಜಿನನಾಥಪುರ: ಶ್ರವಣಭೆಳಗೊಳ ಸಮೀಪದ ಪ್ರಖ್ಯಾತ ಬಸದಿ ಇರುವಒಂದು ಊರಿನ ಹೆಸರು ಈ ಜಿನನಾಥಪುರ [ಎ.ಕ. ೨(ಪ)೫೨೫ (೩೭೮) ರಿಂದ ೫೪೬(೩೮೯) ರವರೆಗಿನ ೧೬ಶಾಸನಗಳು; ಪು.೩೨೩ರಿಂದ ೩೩೧] ಜಿನಪುರ ಎಂಬುದು ವ್ಯಾಖ್ಯಾನ ನಿರಪೇಕ್ಷವಾದ ಜೈನ ಗ್ರಮನಾಮರೂಪವಾಗಿದೆ.

೪. ಜಿನ್ನ ಹಳ್ಳಿ ; ಇದುಇಂದಿನ ಮೈಸುರೂ ಜಿಲೆಯ ಹೆಗ್ಗಡದೇವನಕೋಟೆ ತಾಲೂಕಿನಲ್ಲಿರುವ ಒಂದು ಹಳ್ಳಿಯ ಗೆಸರು ಇಲ್ಲಿ ಮೂರು ಶಾಸನಗಳು ದೊರೆತಿವೆ. ಈಊರು ಗಂಗರ ಆಳ್ವಿಕೆಗೆ ಸೇರಿತ್ತೆಂದುಈ ಶಾಸನಗಳಿಂದ ತಿಳಿದು ಬರುತ್ತದೆ.; ಎ.ಕ. ೩(ಪ) ಹೆಕೋ .೨೪(೪ಹೆಕೋ ೧೦೮೦)೦ ,೨೫(೪.ಹೆಕೋ೧೧೯)ಮ್ಮತ್ತು ೨೬(೪ಹೆಕೋ ೧೧೦).ಜಿನ್ನಹಳ್ಳಿಯಈ ೨೬ನೆಯಶಾಸನವು ಕಿ.ಶ ೯–೧೦ ನೆಯಶತಮಾನದುಗಿದೆ.

೫. ಜಿನ್ನೇ ನಹಳ್ಳಿ: ಇದು ಕೊಡ ಶ್ರವಣಬೆಳಗೂಳದ ನೆರೆಹೂರೆಯಲ್ಲಿ ಇರುವ ಹಳ್ಳಿಗಳಲ್ಲೊಂದು .ಒಂದು ಶಾಸನದಲ್ಲಿ ಈಹಳ್ಳಿಗೆ 'ಪುಟಸಾಮಿ ಸೆಟ್ಟಿಯರ ಮಗ ಚೆಂನ್ನಣನು ಬಿಟ್ಟಜಿಂನೆಯನಹಳ್ಳಿ ಯ ಗ್ರಾಮ'ಎಂದಿದೆ [ಎ.ಕಂ. ೨(ಪ) ೫೪೦(೩೯೦)೧೬೭೩. ಪು೩೩೨]. ಜಿಂನೆಯನಹಳ್ಳಿ ಎಂಬುದುಜಿನ್ನೇನಹಳ್ಳಿ ಮಾರ್ಪಾಟು ಪಸ್ಡೆದುಕೊಂಡಿದೆನ್ನ ಬಹುದು. ಇಲ್ಲಿ ದೊರೆತಿರುವ ೧೪ ನೆಯ ಶತಮಾನದ ಶಾಸನದಲ್ಲಿ [ಅದೇ ,೫೪೧(೩೯೧)ಈ ಜಿನೇನಹಳ್ಳಿಯ ಶ್ರೀಚಾಮಾಂಡರಾಯನ ಬಸಿಯ ಸೀಮೇಗೆ ಒಲಪಟ್ಟಿತ್ತೆಂದು ಹೇಳಿದೆ.

೬ ಜಿನೇನಹಳ್ಳಿ: ಬೆಳುಗುಳದ ಜಿನಧರ್ಮಕ್ಕೆ ಬಿಟ್ಟಂಥ ಗ್ರಾಮಜಿನ್ನಹಳ್ಳಿ

[ಎ. ಕ. ೨(ಪ) ೩೫೧(೨೪೯) ೧೭೨೩, ಪು. ೨೦೨ ಸಾಲು: ೨೨]

೭. ತಿಪ್ಪೂರು ತೀರ್ಥದಹಳ್ಳಿ: ಮಡ್ಯ ಜಿಲ್ಲೆ, ಮದ್ದೂರುತಾಲ್ಲೂಕಿನ ಅರೆತಿಪೂರು ಒಂದು ಪ್ರಸಿದ್ಧ ,ಪ್ರಾಚೀನ ಜೈನ ಕೇದ್ರ.ಇದನ್ನು ಶಾಸನಗಳಲ್ಲಿ ತಿಪ್ಪೊರು ತೀರ್ಥಹಳ್ಳಿ ಎಂದು ಕರೆಯಲಾಗಿದೆ. (ಎ. ಕ. ೭ (ಪ)೧೦೬ (೧೧೧ಮವ ೪೮) ೧೭೦೦.ಹಾಗಳಹಳ್ಳಿ. ಪು.೩೧೯] . ಜೈನದೇವಾಲಯಹಳಿಂದಾಗಿ ಈ ಊರಿಗಿ 'ತೀರ್ಥ' ವೆಂದು ಹೆಸರಾಗಿದೆ.

೮. ಪಾರ್ಶ್ವನಾಥಪುರ– ಪಾರ್ಶ್ವಪುರ : ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಯಲ್ಲಾದಹಳ್ಳಿಯ ಪ್ರಾಚಿನ ಹೆಸರು ಪಾರ್ಶ್ವನಾಥ ಪುರ, ಅದರಸಣ್ಣಸಿದ ರೂಪ ಪಾರ್ಶ್ವಪುರ. ಇದಕ್ಕೆ ಸೂರಹಳ್ಳಿ ಎಂದೂ ಹೆಸರಿದೆ. ಅನಂತರಯಲ್ಲಾದಹಳ್ಳಿ ಎಂದೂ ಮಾರ್ಪಾಟು ಪಡೆದಿದೆ.

ಶ್ರೀಪಾರ್ಶ್ವಪುರಮಂ ಮಾಡಿ ದೇವರಾಜಗೆ ಧಾರಾಪೂರ್ವಕಂ ಮಾಡಿ

ಯಾಚಂದ್ರಾರ್ಕ್ಕತಾರಂಸಲುವಂತಾಗಿ ಕೊಟ್ಟ (ರ)

[ಎ.ಕ. ೭(ಪ) ನಾಮಂ. ೬೪(೪ ನಾಮಂ ೭೬)೧೧೪೫.ಯಲ್ಲಾದಹಳ್ಳಿ .ಪು. ೪೯]

೯. ಬಸದಿಹಳ್ಳಿ : (ಮಂಡ್ಯ ಜಿಲ್ಲೆ / ತಾಲ್ಲೂಕು) ಗುತ್ತಲು ಗ್ರಾಮದ ಶಾಸನದಲ್ಲಿಎರಡುಕಡೆ ಬಸದಿಯಿಂದಾಗಿ ಊರಿಗೆ ಬಸದಿಹಳ್ಳಿಎಂದು ಕರೆಯಲಾಗಿದೆ. [ಎ.ಕ. ೭(ಪ) ಮಂ ೧೦೬(೧೧೧ ಮಂ ೧೦೦)೪೦.ಸಾಲು; ೯,೧೮]ಬಸದಿಹಳ್ಳಿಎಂಬುದು ಬಸಿಚಿಕ್ಕಬಸಿ,

ಉಲ್ಲಾಳಬಸಿ,ಬಸಿಹೊಸಕೋಟೆ,ಬಸಿತಿಪ್ಪೂರು [ಅದೇಮದ್ದೂರುಶ೧. ೧೪-೧೫ ಶ], ಬಸಿಹಳ್ಳಿ [ಎ.ಕ. ೯(ಪ)ಬೇ.೩೮೮ ರಿಂದ ೪೦೮] ಮತ್ತು[ಎ.ಕ. ೬(ಪ)ಪಾಂಪು೧೬(೧೧೧ಶ್ರೀಪ೧೪೭)೯೧೦ಶ.] ಕ್ಯಾತನಹಳ್ಳಿಯ(ಮಂಡ್ಯ ಜಿ./ಪಾಂಪುತಾ.) ಪು.೧೧೩],ಬಸಿಮಾದಳಿ ಗ್ರಾಮ [ಎ.ಕ. ೪(ಪ)ಪು ೩೨(೪ಹು೧೩೯)೧೬೬೯ ತರೀಕಲ್ಲು(ಮೈ ಜಿ. /ಹು ತಾ.) ಪು.೫೦೪ ]- ಎಂಬ ನಾನಾ ರೂಪಗಳಲ್ಲಿ ಶಾಸನಗಳಲ್ಲಿ ಕಂಡುಬರುತ್ತದೆ. ಬಸದಿಗಳ ಪ್ರಾಮುಖ್ಯ ಹಾಗೂ ಬಸದಿಗಳ ವಿಚಾರದಲ್ಲಿ ಜನ ತಳೆದಪವಿತ್ರ ವಾದ ಭಾವನೆ-ಇವು ಬಸದಿಗಳಹೆಸರಿನ ಎಡೆಗಳಿಂದ ಸಷ್ಟವಾಗುತ್ತವೆ.

೧೦. ಮಾಣಕದೊಡಲೂರು:ಶ್ರೀಮಾನ ಮಹಾದಂಡನಾಯಕ ಪುಣಸಮಯ್ಯ ಬಸದಿಯಂ ಮಾಡಿಸಿದಮಾಣಕದೊಡಲೂರು ಮಂ(ಎ.ಕ.೬(ಪ) ಕೃಪೇ೧೦೭ (೪ಕೃಪೇ ೩೭)ಅತೇದಿ. ಬಸಿ(ಮಂಡ್ಯ ಜಿ/ಕೃಪೇತಾ)ಪು. ೯೬].

ಮಾಣಕದೊಡಲೂರು ಎಂಬುದು ಅನಂತರದ ರೂಪ: ಈ ಸಮಾಸ ಶಬ್ದದಲ್ಲಿರುವ ಪೂರ್ವಪದ ತದವರೂಪ. ಇದಕ್ಕೂ ಹಿಂದಿನ ರೂಪ'ಮಾಣಕ್ಯವೊಲ್' ಎಂಬುದು;

ಶ್ರೀಮತು ಮಾಣಕ್ಕವೊಱಲ ಹೊಯಳಜಿನಾಲಅಯ

[ಎ.ಕ. ೬(ಪ)ಕೃಪೇ೧೦೬ (೪ಕೃಪೇ೩೬) ೧೧೬೫ ಬಸಿಪು. ೯೬ ಸಾಲು;೬]

ರಿಶಿಯರಾಹಾರದಾನಕಮಾಣ ಕ್ಯವೊಱಲ ಮಾಡಿ[ಅದೇ, ಸಾಲು; ೮]

ಜೈನಧರ್ಮ- ಸಾಹಿತ್ಯದ ಹಿನೆಲೆಯಲ್ಲಿ ಇದು ಮಹತ್ವದ ಸಳನಾಮ. ‍'ಮಾಣಕ್ಯ'ಜಿನ, ಮಾಣಕ್ಯ ಸ್ವಾಮಿ ಎಂದರೆ ಜೈನಧರ್ಮದ ಆದಿನಾಥ ತೀರ್ಥಂಕರರು. ಮಾಣಕ್ಯಜಿನಾಲಯವು ಆದಿನಾಥ(ವೃಷಭನಾಥ, ಪುರುದೇವ, ಆದಿದೇವ ) ಜಿನಮಂದಿರ ಎಂದರ್ಥ . ಹೀಗಾಗಿ ಈ

ಶಾಸನೋಕ ಹೊಯಳ ಜಿನಾಲಯವು ಆದಿ ಜಿನಾಲಯಾಗಿತ್ತು. ಆದಿಜಿನಾಲಯವಿದುದರಿಂದಆ ಊರಿಗೆ ಮಾಣಕ್ಯವೊಟ್ಟಿಲ್ (ಮಾಣಕ್ಯ+ ಪೊಟಿಲ್) ಎಂದು ಹೆಸರಾಯಿತು.ಇದು ಜನರ ಉಚಾರದ ಅನುಕೊಲಕ್ಕಾಗಿಮಾಣಕದೊಡಲೂರು ಎಂದು ವ್ಯತ್ಯಾಸಹೊಂದಿ,ಮತ್ತೆಅಂತಿಮವಾಗಿ ಇದು 'ಬಸಿ 'ಎಂಬ ಹೆಸರಿನಿಂದ ಇಂದು ಚಲಾವಣೆಯಲ್ಲಿದೆ. ಈಊರಿಗೆ ಇಂದು ಚಾಲಿಯಲ್ಲಿರುವ ಬಸುಎಂಬ ಹೆಸರೇ ಸಷವಾಗಿ ಸೂಚಿಸುವಂತೆ, ಈಹೆಸರು ಬಸದಿಯ ಕಾರಣದಿಂದ ಬಂದಿದೆ; ಅದರಂತೆ ಮಾಣಕ್ಯವೊಟಿಲು ಎಂಬುದೊಮಾಣಕ್ಯಜಿನನ ಬಸದಿಯಿಂದ ಬಂದ ಹೆಸರಾಗಿದೆ. .

ಜೈನ ಸಮಾಜದಲ್ಲಿ ವ್ಯಕಿಗಳಿಗೆ ಇರುವ ಹೆಸರುಗಳಲ್ಲಿ ಆದೇಪ್ಪ ಆದೆಣ್ಣ ಆದಯ್ಯ, ಆದಿರಾಜು, ಮಾಣಕ್ಯರಾಜು, ಮಾಣಕಪ್ಪ, ಮಾಣಕ್ಯಣ್ಣ – ಎಂಬುವೆಲ್ಲ ಆದಿಜಿನನಿಗೆ ಸಂಬಂಧಿಸಿದ ವ್ಯ್ಯಕಿ ವಾಚಕ ಮಾತುಗಳು. ಮಾಣಕಮ್ಮ, ಮಾಣಕ್ಯ, ಮಾಣಕ್ಯಕುಮಾರಿ ಎಂದು ಹೆಂಗಸರಿಗೂ ಹೆಸರಿಡುತ್ತಾರೆ.

ಈ ಎಲ್ಲ ಹಿನ್ನೆಲೆಯಲ್ಲಿ ಮಾಣಕ್ಯವೊಟಿಲ್ಎಂಬುದು ವಿಶಿಷವಾದ ಜೈನರ ಸಳ ನಾಮವಾಗಿದೆ.

೬. ಮುಕ್ಕೂಡೆಹಳ್ಳಿ (ಮುಕಡನಹಳ್ಳಿ /ಮುಕ್ಕೂಡ(ಹ) ಳ್ಳಿ /ಮುಕೂಡಿಹಳ್ಳಿ / ಮುಕ್ಕಡಿ ಹಳ್ಳಿ); ಮೈಸೂರು ಜಿ/ಚಾಮರಾಜನಗರ ತಾಲೂಕು.

ಮಲೆಯೂರು ಗ್ರಾಮಕ್ಕೆ ಹತ್ತಿರದಲ್ಲಿ ಇರುವ ಇಂದಿನ ಮುಕಡಹಳ್ಳಿಯ ಹಳೆಯ ಹೆಸರು ಮುಕೊಡೆಹಳ್ಳಿ, ಇದರ ಸಂಸ್ಕೃತ ರೂಪವೇ ಛತ್ರತ್ರ ಯಪುರ . ಮುಕೊಡೆಯಜನರಿಗೆ ಇರುವ ಎಂಟು ಮಹಿಮೆ. (ಅಷ್ಟ ಮಹಾಪ್ರಾತಿಹಾರ್ಯ) ಗಳಲ್ಲಿ ಒಂದು.ಈ ಹಳ್ಳಿಯಲ್ಲಿ ಗಂಗರ ಕಾಲಕ್ಕೆ ಸುಮಾರು ಏಳು–ಎಂಟನೆಯ ಶತಮಾನಕ್ಕೆ ಸೇರಿದಬಸದಿಯ ಭಗ ಅವಶೇಷಗಳಿವೆ. ಅಲ್ಲದೆ.

ಪ್ರಾಚೀನ ಜಿನಶಾಸನದೇವಿಯ ಮೂರ್ತಿಯೊಂದು ಇಲ್ಲಿದು್ದ ಇಂದಿಗೂ ಇಲ್ಲಿ ಇಡೀಊರಿನ ಮುಖ್ಯದೇವತೆಯಾಗಿಆರಧನೆಗೊಳುತ್ತಿದೆ. [ಎ .ಕ. ೪(ಪ) ಚಾನ ೩೭೮೬,೩೭೭].ಶಾಸನಗಳಲ್ಲಿ ಸಹ ಮುಕೊಡಿಹಳ್ಳಿಎಂಬ ಪ್ರಯೋಗವಿದೆ.;ಇವು ಕ್ರಮವಾಗಿ ಕಿ. ಶ. ೧೩೧೬ ಮತ್ತು ೧೬ನೆಯಶತಮಾನದ ಶಾಸನಗಳು [ಅದೇ ,ಪು ೨೪೯-೫೦] ಮುಕ್ಕೊಡೆಹಳ್ಳಿಯ ಪ್ರಾಚೀನಬಸದಿಯ ಅವಶೇಷಗಳನ್ನು ನೆರೆಯ ಊರಾದ ಕೆಲಸೂರಿನಲ್ಲಿರುವ ಚಂದ್ರ ಪ್ರಭಬಸದಿಯ ಆವರಣದಲ್ಲಿ ಸೇರಿಸಲಾಗಿದೆ. ಈಕೆಲಸೂರು ಪ್ರಾಚೀನ ಕಾಲದಿಂದಲೂ ಜೈನ ಕೇಂದ್ರವಾಗಿದೆ. ಗಂಗರ ಸ್ರ ಹೊಟ್ಟ ಶಿವಮಾರನ ಕಾಲದಲ್ಲಿಯೇ, ಇಲ್ಲೊಂದು ಬಸದಿಯಿದು ಅದಕ್ಕೆ ದತ್ತಿ ಕೊಡಲಾಗಿತು ; ಕೆಲ್ಲಿಪುಸೊರು ಎಂಬುದುಕೆಲಸೂರು ಗ್ರಾ ಮಕ್ಕೆ ಇದ್ದ ಹಳೆಯ ಹೆಸರು[ಅಧೇ ಚಾನ. ೩೪೭. ೭ಶಕುಲಗಾಣ (ಮ್ರ ಜಿ./ಚಾನಾತಾ.) ಪು. ೨೨೨)

೧೨. ವಸದಿಗಾಲ್; ಕೊಡಗೂರು ವಿಷಯದಲ್ಲಿ (ಕೊಡಗೂರಾಡು) ಅಂತರ್ಗತ ಕೆಲ್ಲಿಪುಸೂರು ಗ್ರಾಮದ ಚೈತ್ಯಾಲಯಕ್ಕೆ ಗಂಜೆನಾಡಕಣ್ಣಮ್ಮನ ಮತ್ತುಇತರರು, ಗಂಗರಸನಾದಮುತ್ತರಸ(ವೃದ್ಧರಾಜ)ಶಿವಮಾರನ(೬೭೯-೭೨೬) ಒಪ್ಪಿಗೆ ಪಡೆದು ವಸದಿಗಾಲು ಗ್ರಾ ಮವನ್ನು ದತ್ತಿಯಾಗಿ ಬಿಟ್ಟು ಕೊಟ್ಟರು[ಮ್ರ.ಆರಿ.೧೯೨೫-೧೦೬; ೧೯೮೪;ನಂ೩೫:೧೩೫ ೩೯;ಎ.ಕ.೪(ಪ)ಚಾಮರಾ.೩೪೭.೭-೮ ಶ. ಕುಲಗಾಣ ಪು.೨೨೦-೨೪]. ಈವಸದಿಗಾಲು ಎಂಬಸಳನಾಮವುವಿಶೇಷಗಮನಿಕೆಗೆಅರ್ಹವಾಗಿದೆ.ವಸದಿಗಾಲು ಎಂಬುದು ಬಸದಿಯೂರು ಎಂಬರ್ಥದ ಪ್ರಾಚೀನ ರೂಪ.ಏಳು-ಎಂಟನಯ ಶತಮಾನದಲ್ಲಿಯ ಒಂದು ಊರಿಗೆಬ(ವ) ಸದಿಗಾಲು ಎಂಬಹೆಸರಿತ್ತೆಂಬುದು ಜೈನ ಸಳನಾಮಾಧ ಯನಕ್ಕೆ ಒಳ್ಳೆಯಾಆಕರವಾಗಿದೆ. **vasadikal as thename of a village may be takento indicatethe predominance of jainismthereat[Ramesh,kv. Lwg;1984;138n]**

೬. ಶ್ರವಣನಹಳ್ಳಿ : ಮಂಡ್ಯ ಜಿಲ್ಲೆಯ ಕೃಷರಾಕಪೇಟೆ ತಾಲೂಕಿನ ಒಂದುಹಳ್ಳಿಯ ಹೆಸರು' ಶ್ರವಣನಹಳ್ಳಿ' ಎಂದು ಇಲ್ಲಿ ವೀರ ಕೊಂಗಳ್ವ ಜಿನಾಲಯ ಪ್ರಸಿದ್ಧವಾಗಿತ್ತು. ಈರಾಜ ಬಸದಿಯಲ್ಲಿ ಜಿನಮುನಿಗಳು , ಶ್ರವಣರು ಇರುತ್ತಿದ್ದರು; ಅವರಿಂದಾಗಿ ಈ ಊರಿಗಿ ಶ್ರವಣನಹಳ್ಳಿ ಎಂದು ಹೆಸರಾಯಿತು. [ಎ.ಕ. ೬(ಪ) ಕೈ ಪೇ. ೨೧ (೮೧೯೭೭-೧೫) ೧೧೪೦ಪು. ೧೫] . ತುಮಕೂರು ಜಿಲ್ಲೆ ಮಧುಗಿರಿತಾಲ್ಲೂಕು ಕೊಡಿಗೇನಹಳ್ಳಿ ಹೋಬಳಿಯಲ್ಲಿ 'ಶ್ರವಣನಹಳ್ಳಿ' ಎಂಬ ಗ್ರಾಮವಿದೆ. ಇದರ ನಿಷ್ಪತ್ತಿಯಲ್ಲೂ, ಪೂರ್ವ ಶಬ್ಧವನ್ನು 'ಶವಣ' ಸ್ಂಬಂಧದಿಂದಗರುತಿಸಬಹುದು.

೧೪. ಸವಣನ ಕೆಱ:[ಎ.ಕ. ೭-೧(೧೯೦೨) ಶಿವಮೊಜಿ/ತಾ.)ಪು .೬೦ಸಾಲು:೬೬]. ಸಂಸ್ಕೃತದಲ್ಲಿ, ಜೈನ ಸನ್ಯಾಸಿ ಎಂಬಥ ದಲ್ಲಿರುವ ಶಬ್ದ ಶ್ರ ಮ(ವ) ಣ;ಇದು ಪ್ರಾಕೃತದಲ್ಲಿಸಮ(ವ) ಣ ಎಂದಾಗುತ್ತದೆ. ಕನ್ನಡದಲ್ಲಿ ಶ್ರವಣ-ಶ್ರವಣ, ಸಮಣ ಸವಣ ಎಂಬ ಎರಡೂ ರೂಪಗಳುಬಳಕೆಯಾಗಿವೆ;ಶ್ರವಣ(ಬೆಳಗೊಳ)-ಒಳೆಯ ಉದಾಹರಣ.ಈಶಾಸನದಲ್ಲಿ ಸವಣ ಎಂಬ ರೂಪ ಪ್ರಯೋಗವಾಗಿದೆ. ಇದು ಒಂದು ಕೆರೆಗೆ ಇರುವ ಹೆಸರಾಗಿ ಬಂದಿದೆ.ಧಾರವಾಡ ಜಿಲ್ಲೆ/ತಾಲೂಕು ಮಗದದ ಶಾಸನೋಕ'ಸವಣೆರೆ'ಯೂಇದೇ ಅರ್ಥದಸಳವಾಚಿಯಾಗಿದೆ [ಸೌ.ಇ.ಇ.೧೧-೧.೭೮೧೦೪೫. ಮುಗದಪು. ೭೧ಸಾಲು.

೧೫. ಸವಣನ ಬಿಳಿಲು: ಕುಂತುಳ ವಿಷಯ ಬನವಸೆನಾಡು ಜಿಡ್ಡುಳಿಗೆ೭೦ ರಉದ್ದರೆಯ ಪಂಚಬಸದಿಹೆ ಮಾರಸಿಂಗನ ತಂಗಿ ಸುಗ್ಗಿಯಬ್ಬರಸಿಯು ಸವಣನ ಬಿಳಿಲು ಎಂಬ ಹಳ್ಳಿಯನ್ನು ಒಪ್ಪಿಸಿದಳು[ಎ.ಕ.೮-೨(೧೯೦೨) ಸೊರಬ. ೨೩೩೧೧೩೮-೩೯]

ಕನಕ ಜಿನಾಲಯವೆಸೆದಿರ

ಲನುಪಮನೆಕ್ಕ ಲನೃಪಾಳ ಸವಣನ ಬಿಳಿಲೊಳ

ಜನನುತಮೆನೆ ಭಾನುಕೀರ್ತಿ

ಮುನಿಗೊಪ್ಪಿರೆ ಬಿಟ್ಟ ಮತ್ತ್ರಂ ಪಂನ್ನೆರಡಂ [ಅದೇ]

ಸವಣನ (ಜೈನ ಸನ್ಯಾಸಿಯ)ಹೆಸರಿನ ಈಊರು ೧೨ನೆಯ ಶಮಾನದಲ್ಲಿ ಫ್ರಸಿದ್ದವಾಗಿತ್ತು.

೧೬. ಸವಣನಹಳ್ಳಿ/ಸಾಣೇನಹಳ್ಳಿ : ಮೇಲೆ ವಿವರಿಸಿ ಹೆಸರಿಸಿರುವ 'ಸವಣ' (ಶ್ರಮಣ) ಶಬ್ದವನ್ನು ಹೊತ್ತ್ ಇನೋಂದುಶಾಸನೋಕ ಗ್ರಾಮ ಸವಣನ ಹಳ್ಳಿಎಂಬುದು; ಇದು ಕ್ರಮೇಣ ಮಾರ್ಪಾಟು ಪಡೆದುಸಾಣೇನಹಳ್ಳಿ ಎಂದಾಗಿದೆ.[ಎ.ಕ.೨(ಪ)೫೪೭(೯೭)೧೧೧೯.ಪು೩೩೪–೩೫;ಅದೇ,೫೪೯(೯೯)೧೨ .ಶ. ಪು.೩೩೭ ಮತ್ತು ಅದೇ, ೫೫೦(೪೦೦)೧೨ ಶ.ಪು. ೩೩೭]

೧೭. ಸವಣೇರು: ಅಷ್ಟ ವಿಧಾರ್ಚನೆಗಂ ರಿಷಿಯರಾಹಾರ ದಾನಕ್ಕಂ ಸವಣೇಱಂಬಿಡಿಸಿಕೊಟ್ಟದತ್ತಿ[ಎ.ಕ. ೨(ಪ)೨೭೫(೧೭೮) ೧೨ಶ.ಪು.೧೬೦]; ದಾನಕಿಂಸವಣೇಱಂ ಬಿಡಿಸಿಕೊಟ್ಟಟ[ಅದೇ,೨೭೮ (೧೮೧)೧೨೦ ಪು.೧೬೧]; ಸವಣೇಱ ಬೆಕ್ಕಕಹ್ದೆಱಿಯ ಬೆಟ್ಟದತ್ತಿ[ಅದೇ, ೩೪೨(೨೪೦) ೧೨ಶ.ಪು.೯೩]ಇವೆಲ್ಲ ಫ್ರಯೋಹಹಳಲ್ಲಿರುವ ಸವಣೇರು ಗ್ರಾಮವು ಜೈನ ಸ್ಪ್ರರ್ಶದಹೆಸರು. ಸವಣೂರು,ಸವಣಪ್ಪನ ಗುಡ್ಡ ಮೊದಲಾದಹೆಸರುಹಳೂ ಈ ಮೂಲಕ್ಕೆ ಸಲ್ಲುತ್ತ ವೆ.

೧೮ ಸವದತ್ತಿ: ಬೆಳಗಾವಿ ಜಿಲ್ಲೆಯ ಸವದತ್ತಿ ಫ್ರಸಿದ್ದ ಎಲ್ಲಮ್ಮನ ಗುಡಿ ಇರುವ ಯಾತ್ರಾಸಳ,ಜೈನರ ಪದಾವತೀಯಕ್ಷಿಯೇ ಇಲ್ಲಿರುವ ಎಲ್ಲಮ್ಮ ಳೆಂದುಸಂಶೋಧಕರು ಸ್ಪಷಪಡಿಸಿದ್ದಾಥಿದೆ.ಅದರಂತೆ ಎಲ್ಲಮ್ಮ ದೇವಾಲಯವು ರಟ್ಟರ ಪಟ್ಟ ಜಿನಾಲಯವಾಗಿದ

ಸಂಗತಿಯೂ ಬೆಳಕಿಗೆ ಬಂದಿದೆ.ಸವದತ್ತಿ ಎಂಬ ಹೆಸರು ಸಹ'ಸವಣದತ್ತಿ' ಎಂಬ ಮೂಲರೂಪದ ಸಮೆದರೂಪವೆಂದು ನಾನು ಅನ್ಯತ್ರ ವಿವರವಾಗಿ ಪ್ರ ತಿಪಾದಿಸಿದ್ದ ೀನೆ [ನಾಗರಾಜಯ್ಯ, ಹಂಪ ; ಮೈಳಾಪತೀರ್ಥ– ಶಾಸನಗಳ ಆಧಾರ: 'ಸಮ್ಮಿಲನ' ೧೯೯೪;೧೭–೨೦] ಸವಣದತ್ತಿ–ಸವಂದತ್ತಿ–ಸೌಂದತ್ತಿ ಸವದತ್ತಿ–ಸೌದತ್ತಿಎಂಬ ವ್ಯ ತ್ಯಾಸಗಲನ್ನು ಪಡೆದುಕೊಂಡಿದೆ. ಸವಣರಿಗೆರಟ್ಟರು ಈಸ್ಥಳವನ್ನುದತ್ತಿಯಾಗಿಕೊಟ್ಟದ್ದರು ಅದರಿಂದ ಸವಣದತ್ತಿ ಎಂಬ ಹೆಸರಾಯಿತು.ದನು ನ್ನಮತ್ತೆ ಅತಿ ಸಂಸ್ಕೃತೀಕರಣಹೊಳಿಸಿ(**Hypersanskritisation**)ಸುಗಂಧವರ್ತ್ತಿಎಂದು ಹೇಳಲಾಗಿದೆ.

೧೯ ಕಂಬದಹಳ್ಳಿ: ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಕಂದಹಳ್ಳಿಗೆ ಅಲ್ಲಿರುವ ಮಾನಸ್ತಂಭಗಳಿಂದ ಅದರಲ್ಲಿಯೂ ಮುಖ್ಯವಾಗಿ ಎತ್ತರವಾದ ಬ್ರಹ್ಮದೇವರ ಕಂಬದಿಂದ ಕಂಬದಹಳ್ಳಿ ಎಂಬ ಹೆಸರು ಬಂದಿದೆ [ಎ.ಕ. ೭(ಪ) ನಾಮಂ. ೩೩ (೪ ನಾಮಂ ೧೯) ೧೧೧೮–೧೯ ಕಂಬದಹಳ್ಳಿ ಪು. ೨೦–೨೨]

೨೦. ಗುಮ್ಮಟನಾಥಪುರ: ತೋಟಹಳ್ಳಿ ಎಂಬ ಹೆಸರಿನ ಗ್ರಾಮಕ್ಕೆ ಗುಂಮಟಪುರ ಎಂದು ಪುನರ್ ನಾಮಕರಣ ಮಾಡಲಾಗಿದೆ. [ಎ.ಕ. ೩(ಪ) ಹೆಕೋ.೯೧ (ಎಕ ೪ ಹೆಕೊ. ೧) ೧೪೨೩ ಸರಗೂರು] ಅರುಂದಲೆಗಣದ ಅಗ್ರಗಣ್ಯರಾದ ಪಂಡಿತದೇವರ ಶಿಷ್ಯ ಬಯಿನಾಡ ಮಹಾಪ್ರಭು ಮಸಣೆಯಹಳಿಯ ಕಂಪಣಗವುಡರು ತಮಗೆ ಸ್ವರ್ಗಾಪವರ್ಗ ನಿಮಿತ್ತವಾಗಿ ಬೆಳಗುಳದ ಶ್ರೀ ಗುಂಮಟನಾಥ ಸ್ವಾಮಿಗಳ ಅಂಗರಂಗ ಭೋಗ ಸಂರಕ್ಷಣಾರ್ಥವಾಗಿ ತಮ್ಮ ಬಯನಾಡೊಳಗಣ ತೋಟಹಳಿಯ ಗ್ರಾಮವನ್ನೂ, ಆ ಚತುಃಸೀಮೆಯೊಳಗಣ ಕೆರೆಗದ್ದೆ ಬೆದ್ದಲು ತೋಟತುಡಿಕೆ ಕುಳಹೊಂಬಳಿ ಆಯಹೊಂನು ಮೊದಲಾದುವನ್ನು ಆಚಂದ್ರಾರ್ಕ

ಸಲುವಂತಾಗಿ ಬಿಟ್ಟುಕೊಟ್ಟನು. ಆಗ ತನ್ನ ಈ ತೋಟಹಳಿಗ್ರಾಮಕ್ಕೆ ಗುಂಮಟಪುರವೆಂದು ಹೆಸರಿಟ್ಟನು.

೨೧. ಕೆಲ್ಲಂಗೆಱೆ: ಕೆಲ್ಲಂಗೆಱೆಯು ಜೈನರ ಆದಿತೀರ್ಥವೆಂದೆನಿಸಿತ್ತು. ಗಂಗವಾಡಿಯ ಎಲ್ಲೆಯೊಳಗೆ ಇದ್ದ ಹಳೆಯ ಊರುಗಳಲ್ಲಿ ಒಂದಾದ ಈ ಕೆಲ್ಲಂಗೆರೆಯನ್ನು ಕುರಿತು ಶಾಸನಸಾಮಗ್ರಿಯಿದೆ [ಎ.ಕ. ೨(ಪ) ೪೭೬ (೩೪೫) ೧೧೫೯ ಪು. ೨೮೯-೯೦.ಸಾಲು: ೪೫-೪೬: ಎ.ಕ.೯ (ಪ) ಬೇ. ೩೮೮.೯೫೪. ಬಸ್ತಿಹಳ್ಳಿ; ಅದೇ ಬೇ ೩೨೩. ೧೩ ಶ. ಹಳೇಬೀಡು ಪು. ೩೦೬. ಇತ್ಯಾದಿ]. ಈ ಊರು ಪ್ರಸಿದ್ಧವೂ ಪ್ರಾಚೀನವೂ ಆದ ಕೆಲ್ಲ ಎಂಬ ಒಂದು ಜೈನ ಮನೆತನದವರಿಂದ ಕೂಡಿತ್ತು, ಆ ಕೆಲ್ಲವಂಶದವರು ಕಟ್ಟಿಸಿದ ಕೆರೆಯೂ ಇಲ್ಲಿತ್ತು. ಜೈನಮನೆತನವಾದ ಕೆಲ್ಲಕುಲದವರು ಕಟ್ಟಿಸಿದ ಕೆರೆಯಿಂದಾಗಿ ಈ ಊರಿಗೆ ಕೆಲ್ಲಂಗೆರೆ ಎಂಬು ಹೆಸಾಾಯಿತ್ತು

೨೨. ಕೆಲ್ಲಪುತ್ತಿಗೆ: ಮೇಲೆ೨೧ನೆಯಸಂಖ್ಯೇಯಲ್ಲಿ ಹೇಳಿರುವ ಕೆಲ್ಲ ಎಂಬ ಜೈನವಂಶಕ್ಕೆ ಸೇರಿದಕೆಲ್ಲರಸರು ನೆಲೆವೀಡು ಮಾಡಿಕೊಂಡು ಆಳ್ದಿದ ಒಂದು ಊರುಈಕೆಲ್ಲಪುತ್ತಿಗೆ;ಇದು ದಕ್ಷಿಣ ಕನ್ನಡಜಿಲೆಯಲ್ಲಿದೆ.[**narasimha Murthy, p.N;someinteresting names and terms in thememorial epigraphs form kellaputtige. Stuuuudies in placenames-iv]**

೨೩ ಕೆಲ್ಲಿ ಪುಸೂರು-ಕೆಲಸೂರು : ಗಂಗರಸ ಸೃಗೊಟ್ಟ ಶಿವಮಾರನ ಹಳೆಯ ಬಸದಿ ಕೊಡಿಗುನಾಡ ಕೆಲ್ಲಿ(ಲ್ಲ) ಪುಸೂರು ಎಂಬ ಹಳ್ಳಿ ಯಲ್ಲಿ ತ್ತೆಂಸ್ದು ಶಾಸನ ಹೇಳುತ್ತೆ{ಎ.ಕ.೪(ಪ) ಚಾನ ೩೪೭.ಏಳನೆಯ ಶತಮಾನಕುಲಗುಣ (ಮ್ಯ ಜಿ/ಚಾನತಾ.) ಪು.೨೨೨] ಇಲ್ಲಿ ಹೇಳ್ಲಿರುವ ಕೆಲ್ಲಿಪುಸೂರು ಹಳ್ಳಿಕೂಡು , ಹಲ್ಲಿಡಿನ ಶಾಸನ(೪೦೫)

ಕಾಲದಿಂದ ಪ್ರಸಿದ ಜೈನವಂಶವಾದ ಕೆಲ್ಲಕುಲದವರ ಕಾರಣದಿಂದ ರೂಢಿಗೆ ಬಂದಿದ. ಈಊರಿನ ಈಗ ಕೆ ಲಸೂರು ಎಂದು ಹೆಸರಾಗಿದೆ. ಇಲ್ಲಿ ಇಂದಿಗೂ ಇರುವ ಏಳನೆಯ ಶತಮಾನದ ಚ್ಚಂದ್ರಪ್ರಭ ಜಿನಾಲಯವು ಜೀರ್ಣೋದ್ಧಾರಗೊಂಡು ಸುಸಿತಿಯಲ್ಲಿದೆ.